ವಿಷಯ : ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಒದಗಿಸಿರುವ ಹಣ

1491 (2028)-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 1996-97ನೇ ಸಾಲಿನಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ? ಅದರಲ್ಲಿ ಬಿಡುಗಡೆ ಆದ ಹಣ ಎಷ್ಟು? ಉಳಿದ ಹಣವನ್ನು ಎಂದು ಬಿಡುಗಡೆ ಮಾಡಲಾಗುವುದು.

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು)

ಅ) 1996-97ನೇ ಸಾಲಿನಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಲ್ಲಿ ಒದಗಿಸಲಾಗಿದ್ದ ಅನುದಾನ ಹಾಗೂ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಲಕ್ಷ ರೂಗಳಲ್ಲಿ

ಕ್ರಸಂ.	ಲೆಕ್ಕ ಶೀರ್ಷಿಕೆ (ಯೋಜನೆ	ಮೀಸಲಾಗಿಡ ಲಾಗಿದ್ದ ಅನುದಾನ	ಬಿಡುಗಡೆ ಮಾಡಲಾಗಿರುವ ಅನುದಾನ	ಬಾಕಿ
1.	2402-00-800-2-01	431.00	375.00	56.00
2.	2402-00-800-2-02 (ವಿಶೇಷ ಘಟಕ ಯೋಜನೆ)	173.00	--	
3.	2402-00-800-0-02 (ಗಿರಿಜನ ಉಪ ಯೋಜನೆ)	43.00	43.00	-
	ಒಟ್ಟು	**ರೂ. 647.00**	**418.00**	**56.00**

ಕ್ರೋಢೀ ಕರಣದ ಸಲುವಾಗಿ ಹಿಂದಕ್ಕೆ ಪಡೆಯಲಾಗಿರುತ್ತದೆ.

1996-97ನೇ ಸಾಲಿನ ಆರ್ಥಿಕ ವರ್ಷವು ಈಗಾಗಲೇ ಕೊನೆಗೊಂಡಿದ್ದು ಬಾಕಿ ಬಿಡುಗಡೆ ಮಾಡಬೇಕಾಗಿದ್ದ 56.00 ಲಕ್ಷ ರೂಗಳನ್ನು ಬಿಡುಗಡೆ ಮಾಡಿಲ್ಲ.